

ಚಿತ್ರ: ಶಶಿಧರ್ ಹಳೇಮನಿ

# ಎರಡು ಶಿಲೆಗಳು

ಸಾವಿರಾರು ವರ್ಷಗಳ ಹಿಂದೆ ಜಯಣ್ಣಾಚಾರಿ ಎಂಬ ಶಿಲ್ಪಿಯೊಬ್ಬನಿದ್ದ. ಶಿಲ್ಪಿಯೆಂದರೆ ಅವನು ಅಂತಿಂಥ ಶಿಲ್ಪಿಯಲ್ಲ. ತುಂಬ ದೊಡ್ಡ ದೊಡ್ಡ ಕನಸುಗಳನ್ನು, ಅಷ್ಟೇ ಒಳ್ಳೊಳ್ಳೆ ಕಲ್ಪನೆಗಳನ್ನು ಹೊಂದಿದ್ದು ಅವುಗಳನ್ನು ಸಾಕಾರಗೊಳಿಸುವ ಮಹಾ ಸಾಧಕನಾಗಿದ್ದ. ತನ್ನ ಕಲಾ ಕೌಶಲ್ಯದಿಂದ ಮಹಾಶಿಲ್ಪಿ ಎಂದು ಜನಪ್ರಿಯನಾಗಿದ್ದ. ಶಿಲೆಗಳಲ್ಲಿ ಸುಶ್ರಾವ್ಯ ಸಂಗೀತವನ್ನು ಕೇಳಿಸುತ್ತಿದ್ದ. ಕಲ್ಲು ಕಲ್ಲುಗಳಲ್ಲಿ ಸುಂದರವಾದ ಕಥೆಗಳನ್ನು ಹೇಳಿಸುತ್ತಿದ್ದ. ಉಳಿ ಹಿಡಿದು ತನ್ನ ಕೈಚಳಕದಿಂದ ಕಗ್ಗಲ್ಲನ್ನೂ ಚೆಂದದ ಶಿಲ್ಪವಾಗಿಸುವ ಕಲೆ ಅವನಿಗೆ ಕರಗತವಾಗಿತ್ತು. ಸಾವಿರಾರು ಅಂದಚೆಂದದ, ಅದ್ಭುತ ಮಹದದ್ಭುತ ಶಿಲ್ಪಗಳನ್ನು ಕಡೆದು ನಿಲ್ಲಿಸಿದ್ದ ಅವನಿಗೆ ತೃಪ್ತಿ ಎಂಬುದಿರಲಿಲ್ಲ. ಮಹತ್ವಾಕಾಂಕ್ಷಿಯಾಗಿದ್ದ. ಮಹಾಶಿಲ್ಪ ಕಲಾಕೃತಿಯೊಂದನ್ನು ತಾನು ಬದುಕಿರುವಾಗಲೇ ಜಗತ್ತಿಗೆ ಕೊಟ್ಟು ಹೋಗಬೇಕೆಂಬ ಮಹದಾಸೆ ಮನೆ ಮಾಡಿತ್ತು. ಇದಕ್ಕಾಗಿ ಅವನು ಒಂದು ಒಳ್ಳೆ ಶಿಲೆಯನ್ನು ಹುಡುಕುತ್ತಿದ್ದ.

ಜಯಣ್ಣಾಚಾರಿ ಶಿಲೆಯ ಅನ್ವೇಷಣೆಯಲ್ಲಿ ಬೆಟ್ಟಗುಡ್ಡಗಳ ನಡುವೆ ಹೋಗುತ್ತಿದ್ದಾಗ ಅವನ ಕಣ್ಣಿಗೆ ಆಕಾಶದೆತ್ತರಕ್ಕೂ ಚಾಚಿಕೊಂಡಿದ್ದ ಎರಡು ಬೃಹತ್ ಶಿಲೆಗಳು ಕಂಡವು. ಬಹಳ ದಿನಗಳಿಂದ ಹುಡುಕಾಟ ನಡೆಸಿದ್ದಕ್ಕೆ ಇವತ್ತು ಸಾರ್ಥಕವಾಯಿತೆಂದು ಅವನಿಗೆ ಬಹಳ ಖುಷಿಯಾಯಿತು. ತಾನು ಕೆತ್ತಬೇಕೆಂದುಕೊಂಡಿರುವ ಶಿಲ್ಪ ಕಲಾಕೃತಿಗೆ ಇವು ಅತ್ಯಂತ ಸೂಕ್ತವಾಗಿವೆ ಎಂದು ಅವುಗಳನ್ನು ಇನ್ನಷ್ಟು ಚೆನ್ನಾಗಿ ಪರಿಶೀಲಿಸಿದ. ಹಾಗೆಯೇ ಅವುಗಳ ಸುತ್ತಲೂ ಇದ್ದ ವಿಶಾಲವಾದ ರಮಣೀಯ ಬಯಲು ಪ್ರದೇಶವನ್ನೂ ಸೂಕ್ಷ್ಮವಾಗಿ ಗಮನಿಸಿದ. ಎಲ್ಲವೂ ಅವನಿಗೆ ಸರಿ ಎನಿಸಿತು. ಇನ್ನು ತಡಮಾಡುವುದು ಸರಿಯಲ್ಲವೆಂದು ಆ ಬೃಹತ್ ಶಿಲೆಗಳೆರಡನ್ನೂ ದಿಟ್ಟಿಸುತ್ತಾ ತನ್ನ ಮನಸ್ಸಿನ ಮಹದಾಸೆಯನ್ನು ಅವುಗಳ ಮುಂದೆ ಬಿಚ್ಚಿಟ್ಟ– ‘ಇಡೀ ಜಗತ್ತೇ ನೋಡಿ ಆನಂದಿಸುವಂತೆ ನಿಮ್ಮಲ್ಲೊಬ್ಬರನ್ನು ಕೆತ್ತಿ ಸುಂದರ ಶಿಲ್ಪವಾಗಿ ಕಡೆದು ನಿಲ್ಲಿಸುತ್ತೇನೆ. ನಿಮ್ಮಿಬ್ಬರಲ್ಲಿ ಇದಕ್ಕೆ ಯಾರು ಸಿದ್ಧರಿದ್ದೀರಿ? ದಯಮಾಡಿ ಒಪ್ಪಿಗೆ ಕೊಡಿ’ ಎಂದು ಎರಡೂ ಶಿಲೆಗಳನ್ನೂ ಅವನು ಕೇಳಿದ.

ಶಿಲ್ಪಿಯ ಮಾತು ಕೇಳಿ ಬೆಚ್ಚಿ ಬಿದ್ದ ಒಂದು ಶಿಲೆ ‘ಅಯ್ಯಯ್ಯಪ್ಪಾ, ನಿನ್ನ ದಮ್ಮಯ್ಯ ಅಂತೀನಿ ನನ್ನನ್ನು ಮಾತ್ರ ನೀನು ಶಿಲ್ಪವಾಗಿ ಕೆತ್ತ ಬೇಡ. ನಿನ್ನ ಉಳಿ ಏಟನ್ನು ನೆನಪಿಸಿಕೊಂಡರೆ ಭಯವಾಗುತ್ತೆ. ಇನ್ನು ತಡೆದುಕೊಳ್ಳುವುದು ನನ್ನಿಂದ ಸಾಧ್ಯವಿಲ್ಲ. ನಾನು ಯಾವ ಶಿಲ್ಪವಾಗುವುದೂ ಬೇಡ. ಹೇಗೋ ಹೀಗೆ ನನ್ನ ಪಾಡಿಗೆ ನಾನು ಆರಾಮವಾಗಿದ್ದು ಬಿಡುತ್ತೇನೆ.’ ಎಂದಿತು. ಆ ಶಿಲೆಯ ಮಾತು ಕೇಳಿದ ಅವನು ಅದರ ಪಕ್ಕದಲೇ ಇದ್ದ ಇನ್ನೊಂದು ಶಿಲೆ ಕೂಡ ಇದೇ ಮಾತನ್ನು ಹೇಳಬಹುದೆಂದು ಬೇರೆ ಶಿಲೆಯನ್ನು ನೋಡಿದರಾಯಿತೆಂದು ಅಲ್ಲಿಂದ ಹೊರಡಲು ಮುಂದಾದ. ಆಗ ಇನ್ನೊಂದು ಶಿಲೆ ಅವನನ್ನು ತಡೆದು ನಿಲ್ಲಿಸಿ ‘ಅಯ್ಯಾ ಶಿಲ್ಪಿ ಮಹಾಶಯ, ನಾನೂ ಸಹ ನನ್ನ ಪಕ್ಕದ ಶಿಲೆ ಹೇಳಿದಂತೆಯೇ ಹೇಳುತ್ತೇನೆಂದು ಹೊರಟು ಬಿಟ್ಟೆಯಾ? ಖಂಡಿತ ನಾನು ಹಾಗೆ ಹೇಳುವುದಿಲ್ಲ. ನಿಮ್ಮಂತಹ ಜಗದ್ವಿಖ್ಯಾತ ಮಹಾಶಿಲ್ಪಿ ನನ್ನನ್ನು ಕೆತ್ತಿ ಶಿಲ್ಪವಾಗಿಸುವುದು ನನ್ನ ಮಹಾಭಾಗ್ಯವೆಂದು ಕೊಂಡಿರುವೆ. ನಿಮ್ಮ ಉಳಿ ಏಟಿಗೆ ನಾನು ಸಿದ್ಧವಿರುವೆ. ನನ್ನನ್ನು ಶಿಲ್ಪವಾಗಿ ಕೆತ್ತು...’ ಎಂದು ಹೇಳಿದಾಗ ಶಿಲ್ಪಿ ಜಯಣ್ಣಾಚಾರಿ ಅಪರಿಮಿತವಾಗಿ ಸಂತೋಷಗೊಂಡ.

ಮಾರನೆಯ ದಿನದಿಂದಲೇ ಶಿಲ್ಪಿ ಜಯಣ್ಣಾಚಾರಿ ಉಳಿ ಹಿಡಿದುಕೊಂಡು ಆ ಶಿಲೆಯನ್ನು ಕೆತ್ತಿ ಶಿಲ್ಪವಾಗಿಸತೊಡಗಿದ. ಅದು ಸಂತಸದಿಂದಲೇ ಇವನ ಉಳಿ ಏಟುಗಳನ್ನು ಸಹಿಸಿಕೊಳ್ಳುತ್ತಾ ಹೋಯಿತು. ನೋಡ ನೋಡುತ್ತಿದಂತೆಯೇ ಇಡೀ ಜಗತ್ತೇ ಇತ್ತ ತಿರುಗಿ ನೋಡುವಂತೆ ಅದೊಂದು ಅಪೂರ್ವ ಶಿಲ್ಪವಾಗಿ ರೂಪುಗೊಂಡಿತು. ಅದರ ಚೆಂದಕ್ಕೆ ಬೆರಗಾದ ಜನರು ಅಲ್ಲೇ ಅದಕ್ಕೊಂದು ಸುಂದರ ಆಲಯವನ್ನು ನಿರ್ಮಿಸಿದರು. ಶಿಲ್ಪವಾಗಲು ಒಲ್ಲೆ ಎಂದು ಅಲ್ಲೇ ಆರಾಮವಾಗಿ ಕಲ್ಲಾಗಿ ಬಿದ್ದಿದ್ದ ಶಿಲೆಯನ್ನು ಅದು ಇಲ್ಲಿರುವುದು ನಿಷ್ಪ್ರಯೋಜಕವೆಂದು ಅಲ್ಲಿಂದ ತೆಗೆದು ಜನರೇ ಅದನ್ನು ಮೂಲೆಗೆ ತಳ್ಳಿದರು. ಅದು ಕೇವಲ ಕಲ್ಲಾಗಿಯೇ ಉಳಿದುಕೊಂಡು ಮೂಲೆ ಸೇರಿತು. ಉಳಿ ಏಟು ತಿಂದು ಮಹಾಶಿಲ್ಪಿ ಕೈಚಳಕದಲ್ಲಿ ಅರಳಿದ ಇದರ ಪಕ್ಕದಲ್ಲೇ ಇದ್ದ ಶಿಲೆ ಮಹಾಶಿಲ್ಪ ಕಲಾಕೃತಿಯಾಗಿ ಜಗತ್ತಿನ ಮೂಲೆ ಮೂಲೆಗಳ ಗಮನ ಸೆಳೆಯಿತು. ಎಲ್ಲರ ಕಂಗಳ ಆಕರ್ಷಣೆಯಾಯಿತು. ಎಲ್ಲರೂ ಕೈಯೆತ್ತಿ ಮುಗಿಯುವಂತಹ ಚೆಲುವಿನ ಶಿಲ್ಪವಾಯಿತು. ತನಗೆ ದೊರೆತ ಅವಕಾಶವನ್ನು ಸಹಿಸಲಸಾಧ್ಯವಾದ ಕಷ್ಟವೆಂದು ಕೈಬಿಟ್ಟ ಆ ಶಿಲೆಯು ಈ ಮಹಾಶಿಲ್ಪವನ್ನು ನೋಡುತ್ತಾ ಜೀವಮಾನವಿಡೀ ಕೊರಗ ತೊಡಗಿತು.

**■ ಬನ್ನೂರು ಕೆ. ರಾಜು**